ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ನಾಯಕರು ಪ್ರಸ್ತಾಪ ಮಾಡಿದರು, ಅಡ್ವರ್ಸ್ ಪೊಸೆಶನ್‌ನಲ್ಲಿ 30 ವರ್ಷ ಪೊಸಿಷನ್‌ನಲ್ಲಿದ್ದರೆ ಭೂ ಮಂಜೂರಾತಿ ಮಾಡಬಹುದು, ಒಂದು ಕಡೆ ಜಡ್ಜ್‌ಮೆಂಟ್‌ನ್ನು ಕೊಟ್ಟಿದ್ದಾರೆ, ಹೈಕೋರ್ಟಿನಲ್ಲಿ ಮತ್ತು ಸುಪ್ರೀಂಕೋರ್ಟಿನಲ್ಲಿ ಜಡ್ಜ್‌ಮೆಂಟ್ ಕೊಟ್ಟರು ಇನ್ನೊಂದು ಕಡೆ ಆದೇಶ ಇದೆ, 18 ಕಿಲೋಮೀಟರ್ಸ್ ಒಳಗಡೆ ಗ್ರೀನ್ ಬೆಲ್ಟ್‌ನಲ್ಲಿ ಭೂ ಮಂಜೂರಾತಿ ಮಾಡುವುದಕ್ಕೆ ಬರುವುದಿಲ್ಲ. ಪುರಸಭೆ ವ್ಯಾಪ್ತಿಯಲ್ಲಿ 5 ಕಿ.ಮಿ. ವ್ಯಾಪ್ತಿಯಲ್ಲಿ ಭೂಮಂಜೂರಾತಿ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಮತ್ತೊಂದು ಕಡೆ ಕೋರ್ಟುಗಳಲ್ಲಿ 30 ವರ್ಷ ಅಡ್ವರ್ಸ್ ಪೊಸೆಷನ್‌ನಲ್ಲಿದ್ದಾರೆ. ಜಡ್ಜ್‌ಮೆಂಟ್ ಮೇಲೆ ಖಾತೆ ಮಾಡಿ ಎಂದು ಹೇಳುತ್ತಾರೆ. ಯಾವುದೇ ರೀತಿಯಲ್ಲಿ ಸರ್ಕಾರದ ಆದೇಶವನ್ನು ಗ್ರೀನ್‌ಬೆಲ್ಟ್‌ನಲ್ಲಿ ಬೆಂಗಳೂರು ಸಿಟಿಯೊಳಗಡೆ ವಿಧಾನಸೌಧದ ಪಕ್ಕದಲ್ಲಿ 30 ವರ್ಷದಿಂದ ಪೋಸಿಷನ್‌ನಲ್ಲಿದ್ದಾರೆ. ಅದಕ್ಕೆ ಜಡ್ಜ್‌ಮೆಂಟ್ ಇದೆ, ಮಂಜೂರು ಮಾಡಿಬಿಡು ಅಂದರೆ ಇದು ಕಾನೂನುಬಾಹಿರ. ಈ ಬಗ್ಗೆ ಕಂದಾಯ ಮಂತ್ರಿಗಳು ಈ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ನನ್ನ ಕೊಡಲು ಎಂಬ ಒಂದು ಗ್ರಾಮವಿದೆ, ದೊಡ್ಡಮಂಗಲ ಎಂಬ ಗ್ರಾಮವಿದೆ, ಹಕ್ಕುಪತ್ರ ಇದೆ, ಹಕ್ಕುಪತ್ರವನ್ನು ನೀಡಿದ ಮೇಲೆ ಖಾತೆಯನ್ನು ಮಾಡುತ್ತಿಲ್ಲ. ಇದು ಅಕ್ರಮ ತಹಶೀಲ್ದಾರ್‌ರವರ ಕಛೇರಿಯಲ್ಲಿ ಈ ಬಗ್ಗೆ ನಡವಳಿಕೆ ನಡೆದು, ಹಕ್ಕು ಪತ್ರ ಕೊಟ್ಟು ಭೂ ಮಂಜೂರಾತಿ ಆಗಲಿ ಎಂದು ಹೇಳಿದರೆ, ಇದರಲ್ಲಿ ಯಾವುದು ನ್ಯಾಯವಿದೆ ಅಧ್ಯಕ್ಷರೆ? ಈ ತಕ್ಷಣ ಆ ಎರಡು ಗ್ರಾಮಗಳ ಬಗ್ಗೆ ಹಕ್ಕು ಪತ್ರ ಅದು ಸರಿಯಾಗಿದೆಯೋ ಅಥವಾ ಇಲ್ಲವೋ ಈ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಾನು ಮೂರು ಬಾರಿ ಈ ಸದನಕ್ಕೆ ಶಾಸಕನಾಗಿ ಬಂದಿದ್ದೇನೆ, ಹಿಂದೆ ಸನ್ಮಾನ್ಯ ಶ್ರೀಕಂಠಯ್ಯನವರು ಕಂದಾಯ ಮಂತ್ರಿಗಳಾಗಿದ್ದರು. ಆಗ ತಹಶೀಲ್ದಾರ್‌ರವರು ಸಹಕಾರವನ್ನು ಕೊಡುತ್ತಿರಲಿಲ್ಲ. ಭೂಮಂಜೂರಾತಿಯ ಬಗ್ಗೆ ಸಭೆಗಳನ್ನು ಮಾಡಿದ್ದೇವೆ. ಭೂಮಂಜೂರಾತಿ ಸಭೆಗಳ ಮುಂದೆ ಅರ್ಜಿಗಳನ್ನು ಮಂಡನೆ ಮಾಡುತ್ತಾರೆ.

ಶ್ರಿ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ನಾರಾಯಣಸ್ವಾಮಿಯವರ ಭಾಷಣಕ್ಕೆ ಮುಂಚೆ ಒಂದು ಹೇಳಿಕೆಯನ್ನು ಮಾನ್ಯ ತನ್ವೀರ್‌ಸೇಠ್‌ರವರಿಂದ ಕೊಡಿಸಿಬಿಡಿ.

ಅಧ್ಯಕ್ಷರು : ಆಯಿತು. ಮಾನ್ಯ ತನ್ವೀರ್‌ಸೇಠ್‌ರವರೇ, ತಾವು ಸ್ಟೇಟ್‌ಮೆಂಟ್‌ನ್ನು ಮಾಡಿ.

3:– ಮಂತ್ರಿಗಳ ಹೇಳಿಕೆ:–

ವಿಷಯ :– 43 ಖಾಸಗಿ ಕೈಗಾರಿಕಾ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡುವ ಬಗ್ಗೆ.

ಶ್ರೀ ತನ್ವೀರ್‌ಸೇಠ್ (ಕಾರ್ಮಿಕ ರಾಜ್ಯಸಚಿವರು) : ಮಾನ್ಯ ಅಧ್ಯಕ್ಷರೆ, ಇವತ್ತಿನಿಂದ ಪರೀಕ್ಷೆ ಪ್ರಾರಂಭವಾಗಿದೆ. ಮಾನ್ಯ ಗೌರವಾನ್ವಿತ ಸದಸ್ಯರು ಮಾಧುಸ್ವಾಮಿಯವರು ನಿನ್ನೆ ದಿನ ಸದನದಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವಂತಹ ವಿಚಾರಕ್ಕೆ ರಾಜ್ಯದಲ್ಲಿ ಸುಮಾರು 636 ಐ.ಟಿ.ಐ.ಗಳು ಇದ್ದು ಆ ಪೈಕಿ 43 ಖಾಸಗಿ ಕೈಗಾಗಿಕಾ ಸಂಸ್ಥೆಗಳಲ್ಲಿ ಅಖಿಲಭಾರತ ವೃತ್ತಿ ಪರೀಕ್ಷೆ ಸಂಯೋಜನೆ ಪಡೆಯದೆ ಹಾಗೂ ಶಿಫಾರಸ್ಸು ಆಗದೆ ಇರುವಂತಹ ವೃತ್ತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಿಸಿದ್ದು ಈ ದಾಖಲಾತಿಯು ನಿಯಮ ಬಾಹಿರವಾಗಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ಈ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಖಾಸಗಿ ತರಬೇತಿ ಸಂಸ್ಥೆಗಳಿಂದ ಮುಂದೆ

ಸಂಯೋಜನೆ ಪಡೆಯದೆ ಇರುವಂತಹ ವೃತ್ತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವುದಿಲ್ಲವೆಂದು ಮುಚ್ಚಳಿಕೆ ಹಾಗೂ ಸೂಕ್ತ ದಂಡವನ್ನು ವಿಧಿಸಿ ಈ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಈಗಾಗಲೇ ಅನುಮತಿಯನ್ನು ನೀಡಲಾಗಿದೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) :– ಈ ಎಂಟ್ರೆನ್ಸ್ ಸರಿಯಾಗಿಲ್ಲ ಅಕ್ರಮವಾಗಿ ಸೇರಿಕೊಂಡಿದ್ದಾರೆ, ಎಂದು ಹೇಳಿ ನಾಳೆ ಪರೀಕ್ಷೆ ಇರುವಾಗ ಇವರು ಹೇಳಿಕೊಂಡು ಕುಳಿತುಕೊಳ್ಳುವುದನ್ನು ತಪ್ಪಿಸಬೇಕು. ತಾವು ಈ ಸಾರಿ ಅನುಮತಿಯನ್ನು ಕೊಟ್ಟಿರುವ ಬಗ್ಗೆ ನಾನು ಸ್ವಾಗತಿಸುತ್ತೇನೆ. ಇನ್ನೇನಾದರೂ ಕಾಂಪ್ಲಿಕೇಷನ್ ಇದ್ದರೆ ದಯಮಾಡಿ ಅಟ್ ದಿ ಟೈಮ್ ಆಫ್ ಅಡ್ಮಿಶನ್‌ನಲ್ಲಿ ಸಾಲ್ವ್ ಮಾಡಿಸಬೇಕು. ವರ್ಷವೆಲ್ಲಾ ಬಿಟ್ಟು ಪರೀಕ್ಷೆ ಬಂದಾಗ ಅಡ್ಮಿಶನ್ ಟಿಕೇಟನ್ನು ಇಟ್ಟುಕೊಳ್ಳುವಂತಹ ಕೆಲಸವನ್ನು ಸರ್ಕಾರದವರು ಮಾಡಬಾರದು. ಇದರಿಂದಾಗಿ ನಮ್ಮಗಳ ಮೇಲೆ ಒತ್ತಡ ಬರುತ್ತದೆ. ಅದು ಸರಿಯಾಗಿಲ್ಲವೆಂದರೆ ಬೇಡ ಸಾರ್. ಎರಡೂ ಅಥವಾ ನಾಲ್ಕುತಿಂಗಳ ಒಳಗಡೆ ಇದರ ಬಗ್ಗೆ ಸೆಟ್‌ರೇಟ್ ಮಾಡಿಕೊಳ್ಳಲಿ, ಇಲ್ಲದಿದ್ದರೆ ಅದನ್ನು ಮುಚ್ಚಿಸಿಬಿಡಿ.

ಶ್ರೀ ತನ್ವೀರ್‌ಸೇಠ್ : ಮಾನ್ಯ ಅಧ್ಯಕ್ಷರೆ, ವರ್ಷದ ಪ್ರಾರಂಭದಲ್ಲಿ ನನ್ನ ಇಲಾಖಾ ಅಧಿಕಾರಿಗಳು ಹಾಗೂ ಕೇಂದ್ರ ಸರ್ಕಾರದ ಒಬ್ಬ ಪ್ರತಿನಿದಿ ಒಳಗೊಂಡಂತೆ ಈ ಇಲಾಖೆಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ ಅದರಲ್ಲಿರುವಂತಹ ನ್ಯೂನ್ಯತೆಗಳು ಆಗಿಂದಾಗ್ಗೆ ಬರೆಸಿಕೊಳ್ಳುವಂತಹ ಪದ್ದತಿ ನಮ್ಮ ಇಲಾಖೆಯಲ್ಲಿ ಈಗಾಗಲೇ ಇದೆ. ಅವರಿಗೆ ನಾವು ವರ್ಷ ಪೂರ್ತಿ ಅವಕಾಶವನ್ನು ಮಾಡಿಕೊಟ್ಟರು ಸಹ ಈ ನ್ಯೂನ್ಯತೆಗಳನ್ನು ಸರಿಪಡಿಸದೆ ಇರುವಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ನಾವು ಮುಂದಿನ ದಿನಗಳಲ್ಲಿ ಇಡೀ ರಾಷ್ಟ್ರ ವ್ಯಾಪ್ತಿಯಲ್ಲಿ ಉದ್ಯೋಗದ ಅವಕಾಶವಾಗಬೇಕು, ನ್ಯಾಷನಲ್ ಟ್ರೇಡ್ ಸರ್ಟಿಫಿಕೇಟ್ ಸಿಗುವಂತಹದ್ದು ಆಗಬೇಕಾದರೆ ಈ ಸಂಸ್ಥೆಗಳು ಸಂಯೋಜನೆಯನ್ನು ಪಡೆಯಬೇಕು. ಇವತ್ತು ರಾಜ್ಯದ ವ್ಯಾಪ್ತಿಗೆ ಕೇವಲ ಸೀಮಿತವಾಗುವಂತಹ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಕೇವಲ ಪರೀಕ್ಷೆ ಸಂದರ್ಭದಲ್ಲಿ ಅನುಮತಿಯನ್ನು ಕೊಡುವ ಈ ಪದ್ಧತಿಯನ್ನು ತಡೆಯಬೇಕು. 1993ರಿಂದ ಇಲ್ಲಿಯವರೆವಿಗೂ ರಾಜ್ಯದ ಸುಮಾರು 86 ಸಾವಿರ ಮಕ್ಕಳಿಗೆ ರಾಜ್ಯವ್ಯಾಪ್ತಿಯಿಂದ ಹೊರಹೋಗುವಂತಹ ಅವಕಾಶವಾಗಿಲ್ಲ. ಆ ಕಾರಣಕ್ಕಾಗಿ ಇವತ್ತು ಸ್ವತಃ ಸರ್ಕಾರಿ ಕೈಗಾರಿಕಾ ಸಂಸ್ಥೆಗಳಾಗಿರಬಹುದು, ಅಥವಾ ನಾವು ಏನು ಅನುದಾನಕ್ಕೆ ಒಳಪಡುವಂತಹ ಖಾಸಗಿ ಐ.ಟಿ.ಐ.ಗಳು ಆಗಿರಬಹುದು. ಅವರ ಮೇಲೆ ಸಂಪೂರ್ಣವಾದ ಹತೋಟಿಯನ್ನು ನಾವು ಸಾಧಿಸಿದ್ದೇವೆ. ಖಾಸಗಿ ವಲಯದಲ್ಲಿರುವಂಥ ಕೈಗಾರಿಕಾ ಸಂಸ್ಥೆಗಳಿಗೆ ಒಂದು ಮಾನದಂಡವನ್ನು ವಿಧಿಸಿದ್ದೇವೆ. ಅವರು ಮುಂದಿನ ದಿನಗಳಲ್ಲಿ ಸಂಸ್ಥೆಯನ್ನು ಯಾವ ರೀತಿಯಾಗಿ ನಡೆಸಬೇಕು, ಹೆಚ್ಚಾಗಿ ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳು ಐ.ಟಿ.ಐ.ಪ್ರವೇಶವನ್ನು ಪಡೆಯುವುದರಿಂದ ಅವರಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಬೇಕೆಂದು ಸರ್ಕಾರ ಕಟ್ಟುನಿಟ್ಟಿನ ನಿಯಮಗಳನ್ನು ಮಾಡಿ ಮಾನದಂಡಗಳನ್ನು ವಿಧಿಸಿದ್ದೇವೆ. ತಮ್ಮ ಸಲಹೆಗಳ ಆಧಾರದ ಮೇಲೆ ಮುಂದಿನ ದಿನಗಳಲ್ಲಿ ಅಲ್ಲಿರುವಂತಹ ನ್ಯೂನ್ಯತೆಗಳನ್ನು ನಾವು ಸರಿಪಡಿಸಿಕೊಳ್ಳಲಿಕ್ಕೆ ಹೆಚ್ಚಿನ ಒಂದು ಅವಕಾಶವನ್ನು ಕೊಟ್ಟು ಈ ರೀತಿ ಆಗಬಾರದಂತೆ ನೋಡಿಕೊಳ್ಳುವುದಾಗಿ ಹೇಳಬಯಸುತ್ತೇವೆ.